ವಿಜಯ ಕರ್ನಾಟಕ

ರೆಡ್‌ಬುಲ್ ವಿನ್ನಿಂಗ್ 5 ರಾಷ್ಟ್ರೀಯ ಫುಟ್ಬಾಲ್, ಬ್ರೆಜಿಲ್‌ನಲ್ಲಿ ಪಾಲ್ಗೊಳ್ಳಲು ಅವಕಾಶ

# ಜೈನ್ ವಿವಿಗೆ ಚಾಂಪಿಯನ್ ಪಟ್ಟ




**ವಿಕ ಸುದ್ದಿಲೋಕ** ಬೆಂಗಳೂರು

ಹೈದರಾಬಾದ್ ಎವೇಂಜರ್ಸ್ ತಂಡವನ್ನು 2-0 ಗೋಲುಗಳ ಅಂತರದಲ್ಲಿ ಮಣಿಸಿದ ಬೆಂಗಳೂರಿನ ಜೈನ್ ವಿಶ್ವವಿದ್ಯಾನಿಲಯ ತಂಡ ಭಾರತದಲ್ಲಿ ಮೊದಲ ಬಾರಿಗೆ ನಡೆದ ರೆಡ್‌ಬುಲ್ ವಿನ್ನಿಂಗ್ 5 ರಾಷ್ಟ್ರೀಯ ಫುಟ್ಬಾಲ್ ಚಾಂಪಿಯನ್ ಪಟ್ಟ ಗೆದ್ದುಕೊಂಡಿದೆ.

ಈ ಜಯದೊಂದಿಗೆ ಜೈನ್ ವಿವಿ ತಂಡದ ಆಟಗಾರರು ಬ್ರೆಜಿಲ್‌ನಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಭಾರತ ತಂಡವನ್ನು ಪ್ರತಿನಿಧಿಸುವ ಅವಕಾಶ ಪಡೆಯುವ ಸಾಧ್ಯತೆ ಇದೆ.

ಮುಂಬಯಿಯಲ್ಲಿ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಗ್ರೂಪ್ ಎ ನಲ್ಲಿ ಬೆಂಗಳೂರು ಮತ್ತು ಪುಣೆ ತಂಡಗಳು ಸೆಮಿಫೈನಲ್ ತಲುಪಿದರೆ, ಗ್ರೂಪ್ ಬಿನಲ್ಲಿ ಹೈದರಾಬಾದ್ ಹಾಗೂ ಗೋವಾ ತಂಡಗಳು ಅಂತಿಮ ನಾಲ್ಕರ ಹಂತ ತಲುಪಿದವು. ಏಕಮುಖವಾಗಿ ನಡೆದ ಸೆಮಿಫೈನಲ್‌ನಲ್ಲಿ ಬೆಂಗಳೂರು ತಂಡ ಗೋವಾ ವಿರುದ್ಧ ಜಯ ಗಳಿಸಿದರೆ, ಹೈದರಾಬಾದ್ ತಂಡ ಪುಣೆಗೆ ಸೋಲುಣಿಸಿತು.

ಹುತ್ತು ನಿಮಿಷಗಳ ಫೈನಲ್ ಪಂದ್ಯದಲ್ಲಿ ಬೆಂಗಳೂರು ತಂಡದ ನಾಯಕ ಸುದರ್ಶನ್ ಲೋಕೂರ್ ಮೊದಲ ಗೋಲು ಗಳಿಸಿ ತಂಡಕ್ಕೆ ಮುನ್ನಡೆ ಕಲ್ಪಿಸಿದರು. ನಂತರ ಕೇಶವ್ ಪರೇಖ್ ಜೈನ್ ವಿಶ್ವವಿದ್ಯಾನಿಲಯದ ಪರ ಎರಡನೇ ಗೋಲು ಗಳಿಸಿದರು.